to individuals to enrol as members of P.L.D. Banks, subsidy to enrol as members, etc. Health and housing and other schemes, acquisition of land for house sites in rural areas, acquisition of land for house sites in urban areas, subsidy for construction of houses, drinking water wells, legal aid for cases under removal of untouchability Act, providing electricity to Harijan houses, supply of free timber.

SRI C.M. ARUMUGHAM.—You were pleased to give planned expenditure. Can you give non-plan expenditure under Social Welfare Department and secondly may I know to what percentage it works out to total plan for the entire State for the 5 years ?

SRI L. G. HAVANUR.—Provision made during.—

	1974—75	27377305
	1975—76	35477000
	1976—77	40756000
	1977—78	42535000
Expenditure.	1974—75	23381003
	1975—76	35300000
	1976—77	41131725
	1977—78	41700624

These figures relate only to Scheduled Castes.

ಶ್ರೀ ಎಸ್. ಎಸ್. ಅರಕೇರಿ.– ನಾಲ್ಕು ವರ್ಷದಲ್ಲಿ ೬.೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಮುಂದೆ ಒಂದು ವರ್ಷದಲ್ಲಿ ೫ ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಹುದು ಎಂದು ಹೇಳಿದ್ದೀರಿ ನನಗೆ ಈ ಪಣ ಲ್ಯಾಪ್ಸ್ ಆಗುವ ಶಂಕೆ ಇದೆ ಇದನ್ನು ತಾವು ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಬೇಕು. ಮತ್ತೆ ಒನೇ ಯೋಜನೆಯಲ್ಲಿ ಹರಿಜನ-ಗಿರಿಜನ ಅಭಿವೃದ್ಧಿಗಾಗಿ ಎಷ್ಟು ಪಣ ಇಟ್ಟಿದ್ದೀರಿ ತಾವು ಎಷ್ಟು ರೆಕಮೆಂಡೇಷನ್ ಮಾಡಿದ್ದೀರಿ ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಎಲ್. ಜಿ. ಹಾವನೂರ್.—ಒನೇ ಯೋಜನೆಯಲ್ಲಿ ಐನು ಇಯರ್ ಪೂರ್ಕ ಮಾಡಿದ್ದೇವೆ ಪೆನ್ನುವ ಫಿಗರ್ಸ್ ಈಗ ಇಲ್ಲ. ಸಾಧ್ಯವಿದ್ದಷ್ಟು ಪೂರ್ತಿಗೆ ಮಾತ್ಯ ಸದಸ್ಯರು ಬೇಳಿ.ವ ರೀತಿಯಲ್ಲಿ ಹರಿಜನ ಗಿರಿಜನ ಅಭಿವೃದ್ಧಿಗಾಗಿ ಹಣ ಖರ್ಚು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

Power Rates for I.P. Sets

661. SRI V. MASIYAPPA (Chitradurga).—Will the Minister of State for Information and Youth Services be pleased to state :—

(*a*) whether the K.E.B. has increased the rates of power supplied to IP sets from the old rate to the present rate of 24 Ps. upto 200 KWTs. and 27 Ps. above 200 KWTs. as per their letter No. KEB/B 10/4152/76-77, dated 6th April 1978 ;

(*b*) whether the Government is aware of the assurance given by the Hon'ble Finance Minister in his Budget Speech that the then existing rates would be retained for power supplied to IP sets for agricultural purposes ;

(c) if so, whether the Government intends to issue directions to the Board to reduce the rates for power for IP sets at the old rate level?

SRI K. H. SRINIVASA (Minister of State for Information and Youth Services),—

(a)—

The rates are revised as under ;—

(i)	For the first 200 units per month.	23 Ps. per unit.
(ii)	For all units in excess of 200 units consumed during the month.	25 Ps. per unit.

(b) Yes.

(c) The State average rate per unit has been brought down from 24.21 paise to 23.35 paise.

ಶ್ರೀ ವಿ. ಮುನಿಯಪ್ಪ.—ಸ್ವಾಮಿ, ಶ್ರೀಕಂಠಯ್ಯನವರು ಹಿಂದೆ ಈ ಖಾತೆಯನ್ನು ಪಡೆದು ಕೊಂಡಿದ್ದಾಗ ಡಿಮ್ಯಾಂಡ್ ಚಾರ್ಜ್ ಬಾಬ್ತು ೧೫ ಪೈಸೆ ಯೂನಿಟ್‌ಗೆ ಇದ್ದುದನ್ನು ವಜಾ ಮಾಡುತ್ತೇವೆಂದು ಈ ಸದನಕ್ಕೆ ಭರವಸೆ ಕೊಟ್ಟಿದ್ದರು. ಈಗ ಪುನರ್ವಿಮರ್ಶಿಸಿ ಅದನ್ನು ಸರಿಪಡಿಸಿ ಚಾರ್ಜ್ ಮಾಡಿರತಕ್ಕದ್ದು ಕಾಣುತ್ತದೆ. ಹಿಂದೆ ಸರ್ಕಾರದವರು ಕೊಟ್ಟ ಭರವಸೆಯನ್ನು ಉಳಿಸಿಕೊಂಡು, ಡಿಮ್ಯಾಂಡ್ ಚಾರ್ಜ್ ವಜಾ ಮಾಡಲಿಕ್ಕೆ ಭರವಸೆ ಕೊಡುತ್ತೀರಾ?

† ಶ್ರೀ ಕೆ. ಎಚ್. ಶ್ರೀನಿವಾಸ್.—ಸ್ವಾಮಿ, ಮಾನ್ಯ ಶ್ರೀಕಂಠಯ್ಯನವರು ಯಾವ ಸ್ವರೂಪದಲ್ಲಿ ಭರವಸೆ ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ, ಶ್ರೀಕಂಠಯ್ಯನವರು ಏನು ಬೇಕಾದರೂ ಭರವಸೆ ಕೊಟ್ಟರು ಅದನ್ನು ಸರ್ಕಾರ ಈಡೇರಿಸುವುದು ಕಷ್ಟ. ಡಿಮ್ಯಾಂಡ್ ಚಾರ್ಜ್ ತೆಗೆಯುತ್ತೇವೆಂದರೆ ಆದರ ಅರ್ಥ ಬರತಕ್ಕ ಆದಾಯವನ್ನು ಸಂಪೂರ್ಣವಾಗಿ ಬಿಟ್ಟು ಕೊಡುತ್ತೇವೆಂದು ಅಲ್ಲ. ಡಿಮ್ಯಾಂಡ್ ಚಾರ್ಜ್ ಬಗ್ಗೆ there is no rational for leying this Demand Charge ಎಂದು ಪ್ರತಿಪಾದನೆ ಬಂತು ಆದರೆ ಬರತಕ್ಕ ಆದಾಯವನ್ನು ಬಿಟ್ಟು ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ವಿ. ಮುನಿಯಪ್ಪ.—ಸ್ವಾಮಿ, ೨೦೦ ಯೂನಿಟ್ ಕೆಳಗೆ ಒಂದು ದರ: ಮತ್ತು ೨೦೦ ಯೂನಿಟ್ ಮೇಲೆ ಒಂದು ದರ ನಿಗದಿ ಮಾಡಿದ್ದೀರಿ. ಇದೇ ಸಭೆಯಲ್ಲಿ ಬೇರೆ ಸಂದರ್ಭದಲ್ಲಿ ೫ ಹಾರ್ಸ್ ಪವರ್ ಇಟ್ಟಿರತಕ್ಕ ರೈತರ ಬಗ್ಗೆ ಆಶ್ವಾಸನೆ ಕೊಡಿಸಿದ್ದೀರಿ. ಇವತ್ತು ೫ ಹಾರ್ಸ್ ಪವರ್ ಇಟ್ಟಿರತಕ್ಕ ರೈತ ೩-೪ ಎಕರೆ ಸಾಗುವಳಿ ಮಾಡಿದರೆ: ಅವನಿಗೆ ೨೦೦ ಯೂನಿಟ್‌ಗಳಿಗಿಂತ ಜಾಸ್ತಿ ಬರುತ್ತದೆ. ತಾವು ಕೊಟ್ಟಿರತಕ್ಕ ಪರಿಹಾರ ೫ ಹಾರ್ಸ್ ಪವರ್ ಇರತಕ್ಕವರಿಗೆ ಆನುಕೂಲವಾಗಬಹುದು ಈ ಅಂಶಗಳನ್ನು ಸರ್ಕಾರದವರು ಪರಿಶೀಲನೆ ಮಾಡಿ; ೨೫೦ ಯೂನಿಟ್ಸ್‌ಗಳು: ೧೦ ಹಾರ್ಸ್ ಪವರ್ ವರೆಗೆ ವಿನಾಯಿತಿ ಕೊಡುವ ಬಗ್ಗೆ ಯೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಈ ರೀತಿ ಸ್ಲಾಬ್ ಮಾಡುವುದು ಉದ್ದೇಶ ಸಣ್ಣ ಪುಟ್ಟ ಹಿಡುವಳಿದಾರರಿರತಕ್ಕ ರೈತರಿಗೆ ಕಡಿಮೆ ಭಾರ ಬೀಳಬೇಕು : ಸಶಕ್ತ ರೈತರಿಗೆ ಹೆಚ್ಚಿನ ಭಾರ ಬೀಳಬೇಕು ಎನ್ನುವ ಉದ್ದೇಶದಿಂದ. ಈ ವಿಚಾರದಲ್ಲಿ ನಾನು ಶಾಸನ ಸಭಾ ಸದಸ್ಯರುಗಳ ಒಂದು ಸಭೆಯನ್ನು ಕರೆದು ಚರ್ಚೆ ಮಾಡಿದಾಗ ನಮ್ಮ ಪತ್ರಿರ ಇರತಕ್ಕ ಅಂಕಿಅಂಶಗಳು ಅಷ್ಟೊಂದು ಸಮರ್ಪಕವಾಗಿಲ್ಲ : ಏಂದು ಕಂಡು ಬಂದದ್ದರಿಂದ, ಎಲ್ಲರ ಒಪ್ಪಿಗೆ ಮೇರೆಗೆ ಒಂದು ತಿಂಗಳ ಅವಧಿಯಲ್ಲಿ ವ್ಯಾಪಕವಾದ ಸರ್ವೆಯನ್ನು ನಡೆಸಿ ಈ ಸಭೆ ಸೇರಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಸರ್ವೆ ಕಾರ್ಯ ನಡೆಯುತ್ತಿದೆ: ಸರ್ವೆ ಫಲಿತಾಂಶ ಬಂದ ಮೆಲೆ ಈ ಸದನದ ಮಂತ್ರಿ ಮೇಲ್ಮನೆಯ ಹಾಗೂ ಎರಡೂ ಪಕ್ಷದ ಆಸಕ್ತಿ ಇರತಕ್ಕ ಸದಸ್ಯರುಗಳು ಒಂದು ಸಭೆಯನ್ನು ಕರೆದು ಅಲ್ಲಿ ಚರ್ಚಿಸಿದಾಗ ಇದರ ಬಗ್ಗೆ ಏನು ಮಾಡಬೇಕು ಎಂಬುದರ ಬಗ್ಗೆ ಆಲೋಚನೆ ಮಾಡುತ್ತೇವೆಂದು ಸ್ಪಷ್ಟಪಡಿಸುತ್ತೇನೆ.